# 3447 – F 02 – VISC – R – M – 17

SIXTH SEMESTER B.COM. (REVISED) DEGREE EXAMINATION, MAY 2017

## INCOME TAX LAW AND PRACTICE – II

Time : 3 Hours] [Max. Marks : 80

***Instructions :*** *1) Answer **all** questions with the strict observation of inner choice in **each** Section.*
*2) Use of simple calculator is **allowed.***
*3) Question **13** case study analysis is **compulsory.***

### SECTION – A

1. Answer **any ten** of the following :
   a) What is short-term capital gain ?
   b) Give formula for calculating indexed cost of acquisition.
   c) Give any four incomes generally chargeable under the head Income from Other Sources u/s 56(i).
   d) Who can claim deduction u/s 80 D and how much ?
   e) What is adjusted gross total income ?
   f) What do you mean by tax-free commercial securities ?
   g) How do you treat the following donations given by an individual u/s 80 G ?
      i) Books worth Rs. 10,000 donated to an approved college.
      ii) Donation of Rs. 25,000 given to National Defence Fund.
   h) How do you treat the share of income received by an individual from Hindu Undivided Family ?
   i) State any two permissible deductions allowed u/s 80 to Firm.
   j) What is set off of losses ?
   k) Name any two income tax authorities.
   l) Expand PAN and TAN. **(10×2=20)**

**[P.T.O.**

Scanned by CamScanner

## SECTION – B

Answer **any three** of the following :

2. Mr. Basavraj had purchased a residential house for Rs. 2,32,000 in 1983-84. On 15th August 2015 he sold this house for Rs. 27,00,000. He purchased a new residential house for Rs. 5,00,000 on 15-3-2016.

   The Cost Inflation Index for financial years were 1983-84 – 116 and 2015-16 – 1081.

   Compute his taxable capital gains for the Assessment Year 2016-17.

3. Mrs. Shruti submits the following information for the Previous Year 2015-16.
   a) Income from salary Rs. 90,000.
   b) Loss from self occupied property Rs. 40,000.
   c) Business loss Rs. 1,00,000.
   d) Income from interest from Bank Rs. 50,000.
   e) Winning from lottery (net) Rs. 35,000.

   Compute her gross total income for the Assessment Year 2016-2017.

4. Mr. Anil's investment for the Previous Year 2015-2016 were as follows.
   a) Rs. 20,000 9% Govt. securities.
   b) Rs. 40,000 12% municipal debentures.
   c) Rs. 1,50,000 10% debentures of Textile Mill Company Ltd.
   d) Rs. 80,000 10% Preference shares in Indian Company.
   e) Rs. 50,000 10% fixed deposit of State Bank of India.

   The Bank charges Rs. 400 as commission for collecting interest. Mr. Anil paid Rs. 500 being interest on loan taken for the purpose of buying debentures of Textile Mill Company Ltd. Compute his Income from Other Sources for the Assessment Year 2016-2017.

Scanned by CamScanner

5. From the particulars given below, calculate the amount of deduction allowable in the case of following individuals under Section 80 C.

| | Mr. Arun Rs. | Mr. Ashok Rs. |
|---|---|---|
| Life Insurance premium paid | | |
| On own life | 20,000 | 30,000 |
| On brother's life | 10,000 | 8,000 |
| On wife's life | 15,000 | – |
| Contribution to Public Provident Fund | 24,000 | 16,000 |
| Repayment of housing loan | 70,000 | 25,000 |
| Payment of daughter's tuition fees | 20,000 | 30,000 |

6. Ramesh and Mahesh are working partners in a professional firm, sharing profits and losses in the ratio of 3 : 2. The Profit and Loss Account of the firm for the year ended 31-3-2016 showed a net profit of Rs. 19,500 after charging the following.

a) Interest on capital at 14%

Ramesh Rs. 10,500

Mahesh Rs. 10,500

b) Salary to partners

Ramesh Rs. 67,500

Mahesh Rs. 67,500

Compute the Professional Income of the firm for the Assessment Year 2016-2017.

7. Describe briefly the powers of Income Tax Officer. **(3×5=15)**

Scanned by CamScanner

## SECTION – C

Answer **any three** questions. Question No. **13** is **compulsory**.

8. From the following information furnished by Mr. Vijay compute his capital gains for Assessment Year 2016-2017.

| **Particulars** | **Residential House Rs.** | **Jewellery Rs.** | **Non Listed shares Rs.** |
|---|---|---|---|
| Cost of acquisition | 10,00,000 | 12,00,000 | 2,00,000 |
| Year of acquisition | 1972-73 | 1969-70 | 1993-94 |
| Cost of additions | 2,00,000 | 2,00,000 | 1,00,000 |
| Year of additions | 1977-78 | 1979-80 | 2004-05 |
| Cost of improvement | 1,40,000 | 76,500 | – |
| Year of improvement | 1986-87 | 1985-86 | – |
| Selling expenses | 20,000 | – | 5,000 |
| Sales proceeds | 1,55,09,800 | 1,50,62,500 | 15,48,000 |
| Year of sale | 2015-16 | 2015-16 | 2015-16 |

The fair market value of the house property and jewellery on 1-4-1981 was Rs. 12,00,000 and Rs. 14,00,000 respectively.

He has purchased new residential house costing Rs. 8,00,000 on 3-2-2015. The Cost Inflation Index were :

1981-82 : 100, 1985-86 : 133, 1986-87 : 140, 1993-94 : 244, 2004-05 : 480 and 2015-16 : 1081.

9. Shri Rajesh furnishes the following particulars of his income relating to P.Y. 2015-16.

a) Rs. 20,000 Interest on 10% tax free bonds of 'B' Ltd.
b) Rs. 5,000 Dividend from Tata Ltd.
c) Rs. 8,000 Dividend from Foreign company
d) Rs. 5,000 Dividend from Co-operative Society
e) Rs. 2,000 Interim dividend at 10% on shares of Reliance Industries
f) Rs. 30,000 Directors Fees
g) Rs. 25,000 Interest on term deposits of Bank

Scanned by CamScanner

h) Rs. 8,000 Family pension amount
i) Rs. 25,000 Royalties from mining (expenses Rs. 3,000)
j) Rs. 18,000 Income from letting machinery and furniture
k) Rs. 12,000 Rent received on subletting house (Rent paid Rs. 6,000)
l) Rs. 35,000 Winning from lottery (Net)
m) Rs. 7,000 Winning from card games (Net)

On 1-11-2016 he purchased capital investment bond worth Rs. 60,000 for which he borrowed Rs. 50,000 at 10% interest p.a.

He claims the following expenses :

i) Collection charges of dividend Rs. 800 (on foreign company dividend)
ii) Interest on loan taken for purchase of shares Rs. 2,000
iii) Interest on loan taken for the purchase of capital investment bond Rs. 2,000
iv) Repairs, insurance and depreciation amounting to Rs. 8,000 on let out machinery
v) Loss on card games Rs. 5,000.

Compute Income from Other Sources for A.Y. 2016-17.

10. Income of Vinayak for P.Y. 2015-16 is as follows :

| | Rs. |
|---|---|
| Income from salary | 2,40,000 |
| Income from LOP | 1,00,000 |
| Loss from SOP (–) | 50,000 |
| Loss from speculation (–) | 45,000 |
| Income from business (before depreciation) | 3,50,000 |
| Income from capital gain | 70,000 |
| Current year depreciation | 1,00,000 |
| Stake money received | 80,000 |
| Loss from owning and maintaining race horse (–) | 60,000 |

He wants to adjust the following brought forward losses and expenses.
Loss on non speculative business for A.Y. 2013-14 Rs. 1,00,000.
Unabsorbed depreciation of 2010-11 Rs. 1,00,000.

Compute his total income for A.Y. 2016-17.

Scanned by CamScanner

11. Vaibhav furnishes the following particulars for P.Y. 2015-16. Compute the allowable deductions u/s 80 from gross total income for A.Y. 2016-17. His gross total income was Rs. 20,00,000.
   1) Life insurance premium paid Rs. 40,000 on the policy of Rs. 1,50,000 taken on 1-1-2012.
   2) Contributed Rs. 40,000 to public provident fund.
   3) Investment in NSC (VIII issue) Rs. 50,000.
   4) Paid for LIC pension plan Rs. 40,000.
   5) He spent Rs. 70,000 on medical treatment of his widowed sister who is severely disabled and dependent on him.
   6) He had borrowed Rs. 2,00,000 for his son's higher education 2 years back and interest on it paid during P.Y. Rs. 20,000.
   7) He took insurance policy on the health of his family with a father of 75 years old and paid insurance premium of Rs. 40,000 by cheque.
   8) a) Donations to approved temple Rs. 30,000
      b) Donations to notified university Rs. 20,000
      c) Donations to municipality for family planning promotion Rs. 30,000

12. Mr. Vinay furnishes the following information for P.Y. ended 31-3-2016.
   a) He is employed in a private company. During the year his basic salary was Rs. 25,000 p.m. He received 20% of basic salary as Dearness Allowance. He also received HRA at 10% of basic salary.
      Following were the deductions from his salary.
      i) Life insurance premium of Rs. 30,000 on a policy of Rs. 5,00,000 which was issued prior to 1-4-2012.
      ii) Professional tax Rs. 200 p.m.
   b) He is owner of a house consisting of two equal units. He retained the I unit for his use and II house is let out at a monthly rent of Rs. 4,500. The municipal value of the house is Rs. 80,000 and municipal tax paid is 10% of municipal value. During the year house loan repaid amounted to Rs. 40,000 which included interest on loan of Rs. 10,000. The letout unit remained vacant for 2 months.

Scanned by CamScanner

c) His income from other sources were

i) Winning from lotteries Rs. 21,000 (Net).

ii) Interest on Bank term deposits Rs. 10,000 (Gross).

iii) Interest on debentures of 'X' Co. Ltd. Rs. 5,400 (Listed).

iv) Dividend from Co-operative Society Rs. 5,000.

He has made following payments during the year :

1) Donations to Prime Minister's National Relief Fund Rs. 10,000.

2) For repairs of notified temple Rs. 8,500.

Compute his total income for A.Y. 2016-17.

13. Case Study (**Compulsory**) :

X, Y and Z are partners sharing profit and losses in the ratio of 6 : 4 : 2. The Profit and Loss Account for the year ending 31-3-2016 showed a profit of Rs. 52,000. Apart from allowable expenses the following are also debited to Profit and Loss Account.

a) Interest on capital at 15% p.a. A – Rs. 1,800, B – Rs. 1,500 and C – Rs. 800.

b) Salary of partners
A – Rs. 20,000, B – Rs. 14,000 and C – Rs. 26,000

c) Loss from sale of car Rs. 7,000.

d) Depreciation Rs. 8,000. But as per the rules only Rs. 7,000 is allowed.

Also the following incomes have been credited to Profit and Loss Account.

a) Bad debts recovered (½ of which allowed earlier) Rs. 6,000.

b) Income from speculation Rs. 8,000.

You are required to answer the following questions for A. Y. 2016-2017.

1) What is the total income of the firm when conditions of Sections 184 and 40 (b) are satisfied ?

2) What is the total income of the firm when conditions of Section 184 and 40 (b) are not satisfied ?

**(3×15=45)**

Scanned by CamScanner

## ಕನ್ನಡ ಆವೃತ್ತಿ

*ಸೂಚನೆಗಳು :* 1) *ಆಂತರಿಕ ಆಯ್ಕೆಗಳಿಗೆ ಒಳಪಟ್ಟು ಎಲ್ಲಾ ವಿಭಾಗಗಳನ್ನು ಉತ್ತರಿಸಿರಿ.*
2) *ಸಾದಾ* **ಕ್ಯಾಲ್ಕುಲೇಟರ್** *ಉಪಯೋಗಿಸಬಹುದು.*
3) *ಪ್ರಶ್ನೆ* **13 ಕಡ್ಡಾಯ***ವಾಗಿದೆ.*

### ವಿಭಾಗ – ಅ

1. ಈ ಕೆಳಗಿನವುಗಳಲ್ಲಿ ಬೇಕಾದ **ಹತ್ತು** ಪ್ರಶ್ನೆಗಳಿಗೆ ಉತ್ತರಿಸಿರಿ :

a) ಅಲ್ಪಾವಧಿ ಬಂಡವಾಳ ಲಾಭವೆಂದರೇನು ?

b) ಸೂಚ್ಯಂಕ ನಿರ್ಧರಿತ ಖರೀದಿ ವೆಚ್ಚವನ್ನು ಲೆಕ್ಕಹಾಕುವ ಸೂತ್ರವನ್ನು ನೀಡಿರಿ.

c) ಕಲಂ 56(i) ಇತರ ಮೂಲಗಳಿಂದ ಬಂದ ಆದಾಯಗಳ ಅಡಿಯಲ್ಲಿ ಸಾಮಾನ್ಯವಾಗಿ ತೆರಿಗೆ ಆಕರಿಸಬಹುದಾದ ನಾಲ್ಕು ಆದಾಯಗಳನ್ನು ಹೆಸರಿಸಿ.

d) ಕಲಂ 80 D ಪ್ರಕಾರ ಯಾರು ಕಡಿತವನ್ನು ಪಡೆಯಬಹುದು ಮತ್ತು ಅದರ ಮೊತ್ತವೆಷ್ಟು ?

e) ಪರಿಷ್ಕರಿಸಿದ ಸ್ಥೂಲ ಒಟ್ಟು ಆದಾಯ ಎಂದರೇನು ?

f) ತೆರಿಗೆ ಮುಕ್ತ ವಾಣಿಜ್ಯ ಭದ್ರತೆಗಳೆಂದರೇನು ?

g) ಕಲಂ 80 G ಪ್ರಕಾರ ಒಬ್ಬ ವ್ಯಕ್ತಿಯು ಈ ಕೆಳಗಿನವುಗಳಿಗೆ ಕೊಟ್ಟ ದೇಣಿಗೆಗಳನ್ನು ಹೇಗೆ ಪರಿಗಣಿಸುವಿರಿ ?

i) ಮಾನ್ಯತೆ ಪಡೆದ ಕಾಲೇಜಿಗೆ 10,000 ರೂಪಾಯಿಗಳ ಕಿಮ್ಮತ್ತಿನ ಪುಸ್ತಕಗಳನ್ನು ದೇಣಿಗೆ ಕೊಟ್ಟಿದ್ದಾನೆ.

ii) ರಾಷ್ಟ್ರೀಯ ರಕ್ಷಣಾ ನಿಧಿಗೆ 25,000 ರೂಪಾಯಿಗಳನ್ನು ದೇಣಿಗೆ ಕೊಟ್ಟಿದ್ದಾನೆ.

h) ಹಿಂದೂ ಅವಿಭಕ್ತ ಕುಟುಂಬದ ಆದಾಯದ ಭಾಗವನ್ನು ಒಬ್ಬ ವ್ಯಕ್ತಿಯು ಪಡೆದಾಗ ಹೇಗೆ ಪರಿಗಣಿಸುವಿರಿ ?

i) ಪಾಲುಗಾರಿಕೆ ಸಂಸ್ಥೆಗೆ ಕಲಂ 80 ಅನ್ವಯ ಲಭ್ಯವಿರುವ ಯಾವುದೇ ಎರಡು ಕಡಿತಗಳನ್ನು ತಿಳಿಸಿರಿ.

j) ನಷ್ಟದ ಹೊಂದಾಣಿಕೆ ಎಂದರೇನು ?

k) ಯಾವುದೇ ಎರಡು ಆದಾಯ ತೆರಿಗೆ ಅಧಿಕಾರಿ ವರ್ಗಗಳನ್ನು ನೀಡಿರಿ.

l) ವಿಸ್ತರಿಸಿರಿ ಪಿ.ಎ.ಎನ್. (PAN) ಮತ್ತು ಟಿ.ಎ.ಎನ್. (TAN). **(10×2=20)**

Scanned by CamScanner

## ವಿಭಾಗ – ಬ

ಬೇಕಾದ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ :

2. 1983-84 ನೇ ಸಾಲಿನಲ್ಲಿ ಮಿ. ಬಸವರಾಜರವರು ರೂ. 2,32,000 ಕ್ಕೆ ಒಂದು ವಾಸದ ಮನೆಯನ್ನು ಖರೀದಿಸಿದರು. 15 ನೇ ಆಗಸ್ಟ್ 2015 ಕ್ಕೆ ಆ ಮನೆಯನ್ನು ಅವರು ರೂ. 27,00,000 ಕ್ಕೆ ಮಾರಾಟ ಮಾಡಿದ್ದಾರೆ. ಅವರು 15 ನೇ ಮಾರ್ಚ್ 2016 ರಂದು ಹೊಸ ವಾಸದ ಮನೆಯನ್ನು ರೂ. 5,00,000 ನೀಡಿ ಖರೀದಿಸಿದ್ದಾರೆ.
   ವೆಚ್ಚ ಏರಿಕೆ ಸೂಚ್ಯಂಕಗಳು: 1983-84 – 116 ಮತ್ತು 2015-16 – 1081.
   2016-17 ಕರಾಕರಣೆ ವರ್ಷಕ್ಕೆ ಅವರ ತೆರಿಗೆಗೆ ಒಳಪಡುವ ಬಂಡವಾಳ ಗಳಿಕೆಯನ್ನು ಲೆಕ್ಕ ಮಾಡಿರಿ.

3. ಶ್ರೀಮತಿ ಶ್ರುತಿ ಅವರು ಆದಾಯ ವರ್ಷ 2015-16 ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಮಾಹಿತಿಯನ್ನು ನೀಡಿರುತ್ತಾರೆ :
   a) ವೇತನ ಆದಾಯ ರೂ. 90,000.
   b) ಸ್ವಂತ ವಾಸದ ಮನೆಯ ನಷ್ಟ ರೂ. 40,000.
   c) ವ್ಯಾಪಾರ ನಷ್ಟ ರೂ. 1,00,000.
   d) ಬ್ಯಾಂಕ್ ಬಡ್ಡಿ ಆದಾಯ ರೂ. 50,000.
   e) ಲಾಟರಿ ಆದಾಯ (ನಿವ್ವಳ) ರೂ. 35,000.
   ಶ್ರೀಮತಿ ಶ್ರುತಿ ಅವರ ತೆರಿಗೆ ವರ್ಷ 2016-2017 ಕ್ಕೆ ಕಡಿತ ಪೂರ್ವ ಆದಾಯವನ್ನು ಲೆಕ್ಕ ಮಾಡಿರಿ.

4. ಆದಾಯ ವರ್ಷ 2015-2016 ಕ್ಕೆ ಶ್ರೀ ಅನಿಲ ಅವರ ಹೂಡಿಕೆಗಳು ಈ ಕೆಳಗಿನಂತೆ ಇರುತ್ತದೆ :
   a) ರೂ. 20,000 9% ಸರ್ಕಾರಿ ಭದ್ರತೆಗಳು
   b) ರೂ. 40,000 12% ಮುನಿಸಿಪಲ್ ಸಾಲಪತ್ರಗಳು
   c) ರೂ. 1,50,000 10% ಟೆಕ್ಸ್‌ಟೈಲ್ ಮಿಲ್ ಕಂ. ಲಿ. ಸಾಲಪತ್ರಗಳು
   d) ರೂ. 80,000 10% ಭಾರತೀಯ ಕಂಪನಿಯ ಆದ್ಯತಾ ಶೇರುಗಳು
   e) ರೂ. 50,000 10% ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುದ್ದತಿ ಠೇವಣಿ.
   ಬಡ್ಡಿ ಸಂಗ್ರಹಕ್ಕಾಗಿ ಬ್ಯಾಂಕಿನ ಕಮಿಷನ್ ರೂ. 400 ಆಗಿದೆ. ಮಿ. ಅನಿಲರವರು ಟೆಕ್ಸ್‌ಟೈಲ್ ಕಂ. ಡಿಬೆಂಚರ್ ಖರೀದಿ ಸಾಲದ ಮೇಲೆ ರೂ. 500 ಬಡ್ಡಿಯನ್ನು ಪಾವತಿಸಿರುತ್ತಾರೆ.
   ತೆರಿಗೆ ವರ್ಷ 2016-2017 ಕ್ಕೆ ಶ್ರೀ ಅನಿಲರವರ ಇತರೇ ಮೂಲಗಳ ಆದಾಯವನ್ನು ಲೆಕ್ಕ ಹಾಕಿರಿ.

Scanned by CamScanner

5. ಸೆಕ್ಷನ್ 80 C ಪ್ರಕಾರ ಈ ಕೆಳಗಿನ ವ್ಯಕ್ತಿಗಳಿಗೆ ದೊರೆಯಬಹುದಾದ ಕಡಿತವನ್ನು ಲೆಕ್ಕ ಹಾಕಿರಿ.

| | ಮಿ. ಅರುಣ ರೂ. | ಮಿ. ಅಶೋಕ ರೂ. |
|---|---|---|
| ಜೀವ ವಿಮಾ ಕಂತು ಪಾವತಿಸಿದ್ದು | | |
| ಸ್ವಂತ ಜೀವದ ಮೇಲೆ | 20,000 | 30,000 |
| ಸಹೋದರನ ಜೀವದ ಮೇಲೆ | 10,000 | 8,000 |
| ಪತ್ನಿಯ ಜೀವದ ಮೇಲೆ | 15,000 | – |
| ಸಾರ್ವಜನಿಕ ಭವಿಷ್ಯ ನಿಧಿ ವಂತಿಗೆ | 24,000 | 16,000 |
| ಮನೆ ಸಾಲ ಮರುಪಾವತಿ | 70,000 | 25,000 |
| ಮಗಳ ವಿದ್ಯಾಭ್ಯಾಸದ ಬೋಧನಾ ಶುಲ್ಕ ಪಾವತಿ | 20,000 | 30,000 |

6. ರಮೇಶ ಮತ್ತು ಮಹೇಶ ಇವರೀರ್ವರು ವೃತ್ತಿಪರ ಪಾಲುದಾರಿಕೆ ಸಂಸ್ಥೆಯಲ್ಲಿ ಕಾರ್ಯನಿರತ ಪಾಲುದಾರರಾಗಿದ್ದಾರೆ. ಅವರು 3 : 2 ರ ಅನುಪಾತದಲ್ಲಿ ಲಾಭ ಮತ್ತು ಹಾನಿಯನ್ನು ಹಂಚಿಕೊಳ್ಳುತ್ತಾರೆ. 31-3-2016 ಕ್ಕೆ ಕೊನೆಗೊಳ್ಳುವಂತೆ ಸಂಸ್ಥೆಯ ಲಾಭ ಮತ್ತು ಹಾನಿ ಖಾತೆಯು ಈ ಕೆಳಗಿನ ಮೊತ್ತವನ್ನು ಕಳೆದ ನಂತರ ರೂ. 19,500 ನಿವ್ವಳ ಲಾಭ ತೋರಿಸುತ್ತದೆ.

a) ಬಂಡವಾಳದ ಮೇಲಿನ ಬಡ್ಡಿ ಶೇ. 14 ರಂತೆ
   ರಮೇಶ ರೂ. 10,500
   ಮಹೇಶ ರೂ. 10,500

b) ಪಾಲುದಾರರ ವೇತನ
   ರಮೇಶ ರೂ. 67,500
   ಮಹೇಶ ರೂ. 67,500

ಆದಾಯ ವರ್ಷ 2016-2017 ಕ್ಕೆ ವೃತ್ತಿಪರ ಸಂಸ್ಥೆಯ ವೃತ್ತಿ ಆದಾಯವನ್ನು ಲೆಕ್ಕ ಹಾಕಿರಿ.

7. ಆದಾಯ ತೆರಿಗೆ ಅಧಿಕಾರಿಗಳ ಅಧಿಕಾರವನ್ನು ಸಂಕ್ಷಿಪ್ತವಾಗಿ ವಿವರಿಸಿರಿ. **(3×5=15)**

Scanned by CamScanner

## ವಿಭಾಗ – ಕ

ಬೇಕಾದ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. ಪ್ರಶ್ನೆ **13** ಕಡ್ಡಾಯ.

8. ಶ್ರೀ ವಿಜಯರವರ ಈ ಕೆಳಗಿನ ಮಾಹಿತಿಯನ್ನು ಆಧರಿಸಿ 2016-2017 ಕರಾಕರಣೆ ವರ್ಷಕ್ಕೆ ತೆರಿಗೆಗೆ ಒಳಪಡುವ ಬಂಡವಾಳ ಗಳಿಕೆಯನ್ನು ಕಂಡುಹಿಡಿಯಿರಿ.

| ವಿವರಗಳು | ವಾಸದ ಮನೆ ರೂ. | ಆಭರಣಗಳು ರೂ. | ಪಟ್ಟಿಯಲ್ಲಿ ಇಲ್ಲದ ಶೇರುಗಳು ರೂ. |
|---|---|---|---|
| ಖರೀದಿ ವೆಚ್ಚ | 10,00,000 | 12,00,000 | 2,00,000 |
| ಖರೀದಿ ವರ್ಷ | 1972-73 | 1969-70 | 1993-94 |
| ಹೆಚ್ಚುವರಿ ವೆಚ್ಚ | 2,00,000 | 2,00,000 | 1,00,000 |
| ಹೆಚ್ಚುವರಿ ವೆಚ್ಚದ ವರ್ಷ | 1977-78 | 1979-80 | 2004-05 |
| ಸುಧಾರಣೆ ವೆಚ್ಚ | 1,40,000 | 76,500 | – |
| ಸುಧಾರಣೆ ವೆಚ್ಚದ ವರ್ಷ | 1986-87 | 1985-86 | – |
| ಮಾರಾಟದ ಖರ್ಚು | 20,000 | – | 5,000 |
| ಮಾರಾಟದ ಬೆಲೆ | 1,55,09,800 | 1,50,62,500 | 15,48,000 |
| ಮಾರಾಟದ ವರ್ಷ | 2015-16 | 2015-16 | 2015-16 |

ದಿನಾಂಕ 1-4-1981 ರಂದು ವಾಸದ ಮನೆ ಮತ್ತು ಆಭರಣಗಳ ನೈಜ ಮಾರುಕಟ್ಟೆ ಬೆಲೆಯು ಅನುಕ್ರಮವಾಗಿ ರೂ. 12,00,000 ಮತ್ತು ರೂ. 14,00,000 ಆಗಿರುತ್ತದೆ.

ಅವರು ದಿನಾಂಕ 3-2-2015 ರಂದು ರೂ. 8,00,000 ಮೌಲ್ಯದ ವಾಸದ ಮನೆಯನ್ನು ಖರೀದಿಸಿದ್ದಾರೆ.

ವೆಚ್ಚ ಹಣದುಬ್ಬರ ಸೂಚ್ಯಂಕ : 1981-82 ಕ್ಕೆ 100, 1985-86 ಕ್ಕೆ 133, 1986-87 ಕ್ಕೆ 140, 1993-94 ಕ್ಕೆ 244, 2004-05 ಕ್ಕೆ 480 ಮತ್ತು 2015-16 ಕ್ಕೆ 1081 ಆಗಿರುತ್ತದೆ.

Scanned by CamScanner

9. 2015-16 ನೇ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಆದಾಯದ ವಿವರಗಳನ್ನು ಶ್ರೀ ರಾಜೇಶರವರು ಸಲ್ಲಿಸಿದ್ದಾರೆ.

a) B ನಿಯಮಿತದ ಶೇ. 10 ರ ತೆರಿಗೆ ಮುಕ್ತ ಬಾಂಡುಗಳ ಮೇಲಿನ ಬಡ್ಡಿ ರೂ. 20,000

b) ಟಾಟಾ ಕಂಪನಿಯಿಂದ ಬಂದ ಲಾಭಾಂಶ ರೂ. 5,000

c) ವಿದೇಶಿ ಕಂಪನಿಯಿಂದ ಬಂದ ಲಾಭಾಂಶ ರೂ. 8,000

d) ಸಹಕಾರಿ ಸಂಘಗಳಿಂದ ಬಂದ ಲಾಭಾಂಶ ರೂ. 5,000

e) ರಿಲಾಯನ್ಸ್ ಇಂಡಸ್ಟ್ರೀಸ್ ಶೇರುಗಳ ಮೇಲೆ ಶೇ. 10 ರಂತೆ ಬಂದ ಮಧ್ಯಾವಧಿ ಲಾಭಾಂಶ ರೂ. 2,000

f) ನಿರ್ದೇಶಕರ ಫೀ ರೂ. 30,000

g) ಬ್ಯಾಂಕಿನಲ್ಲಿರುವ ಅವಧಿ ಠೇವಣಿ ಮೇಲಿನ ಬಡ್ಡಿ ರೂ. 25,000

h) ಕುಟುಂಬ ಪಿಂಚಣಿ ಮೊತ್ತ ರೂ. 8,000

i) ಗಣಿಗಳಿಂದ ಬಂದ ರಾಜಧನ (ಖರ್ಚುಗಳು ರೂ. 3,000) ರೂ. 25,000

j) ಯಂತ್ರಗಳು ಮತ್ತು ಪೀಠೋಪಕರಣಗಳನ್ನು ಬಾಡಿಗೆ ನೀಡಿದುದರಿಂದ ಬಂದ ಆದಾಯ ರೂ. 18,000

k) ಮನೆಯನ್ನು ಪುನಃ ಬಾಡಿಗೆಗೆ ನೀಡಿದ್ದರಿಂದ ಬಂದ ಬಾಡಿಗೆ (ರೂ. 6,000ಕ್ಕೆ ಬಾಡಿಗೆಗೆ ಪಡೆಯಲಾಗಿದೆ) ರೂ. 12,000

l) ಲಾಟರಿಯಿಂದ ಗೆದ್ದ ಬಹುಮಾನ ರೂ. 35,000 (ನಿವ್ವಳ)

m) ಕಾರ್ಡ್ ಆಟದಿಂದ ಗೆದ್ದ ಬಹುಮಾನ ರೂ. 7,000 (ನಿವ್ವಳ)

ದಿನಾಂಕ 1-11-2016 ರಂದು ರೂ. 60,000 ಮೌಲ್ಯದ ಕೆಪಿಟಲ್ ಇನ್‌ವೆಸ್ಟ್‌ಮೆಂಟ್ ಬಾಂಡನ್ನು ಖರೀದಿಸಿದ್ದಾರೆ. ಅದಕ್ಕಾಗಿ ರೂ. 50,000 ಶೇ. 10 ಬಡ್ಡಿ ದರದ ಸಾಲವನ್ನು ಮಾಡಿದ್ದಾರೆ.

ಅವರು ಈ ಕೆಳಗಿನ ಖರ್ಚುಗಳನ್ನು ಮಾಡಿದ್ದಾರೆ.

i) ಡಿವಿಡೆಂಡ್ ಸಂಗ್ರಹಣಾ ವೆಚ್ಚ ರೂ. 800 (ವಿದೇಶೀ ಕಂಪನಿ ಲಾಭಾಂಶದ ಮೇಲೆ)

ii) ಶೇರು ಖರೀದಿ ಮೇಲಿನ ಸಾಲದ ಬಡ್ಡಿ ರೂ. 2,000

iii) ಕೆಪಿಟಲ್ ಇನ್‌ವೆಸ್ಟ್‌ಮೆಂಟ್ ಬಾಂಡ್ ಖರೀದಿಗೆ ಮಾಡಿದ ಸಾಲದ ಬಡ್ಡಿ ರೂ. 2,000

iv) ಬಾಡಿಗೆಗೆ ನೀಡಿದ ಯಂತ್ರೋಪಕರಣಗಳ ರಿಪೇರಿ, ವಿಮೆ ಮತ್ತು ಸವಕಳಿಗಳ ಒಟ್ಟು ಮೊತ್ತ ರೂ. 8,000

v) ಕಾರ್ಡು ಆಟಗಳಿಂದ ಆದ ನಷ್ಟ ರೂ. 5,000.

2016-17 ನೇ ಸಾಲಿನ ಇತರ ಮೂಲಗಳ ಆದಾಯವನ್ನು ಲೆಕ್ಕ ಹಾಕಿರಿ.

Scanned by CamScanner

10. ವಿನಾಯಕರವರ 2015-16 ನೇ ಹಣಕಾಸು ವರ್ಷದ ಆದಾಯಗಳು ಈ ಕೆಳಗಿನಂತಿವೆ :

| | ರೂ. |
|---|---|
| ಸಂಬಳದ ಆದಾಯ | 2,40,000 |
| ಬಾಡಿಗೆಗೆ ನೀಡಿದ ಮನೆಯಿಂದ ಆದಾಯ | 1,00,000 |
| ಸ್ವಂತ ವಾಸದ ಮನೆಯಿಂದಾದ ನಷ್ಟ(–) | 50,000 |
| ಸ್ಪೆಕ್ಯುಲೇಶನ್ ವ್ಯವಹಾರದಿಂದ ಆದ ನಷ್ಟ (–) | 45,000 |
| ವ್ಯವಹಾರದಿಂದ ಬಂದ ಆಧಾಯ (ಸವಕಳಿಯ ಪೂರ್ವದಲ್ಲಿ) | 3,50,000 |
| ಬಂಡವಾಳ ಗಳಿಕೆ ಆದಾಯ | 70,000 |
| ಪ್ರಸಕ್ತ ಸಾಲಿನ ಸವಕಳಿ | 1,00,000 |
| ಸ್ಟೇಕ್ ಹಣ ಬಂದಿದ್ದು | 80,000 |
| ರೇಸ್ ಕುದುರೆ ಮಾಲಿಕತ್ವ ಮತ್ತು ಸಾಕಿದ್ದರಿಂದ ಆದ ನಷ್ಟ (–) | 60,000 |

ಅವರು ಈ ಕೆಳಗಿನ ಹಿಂದಿನ ವರ್ಷಗಳಿಂದ ಬಾಕಿಯಾಗಿ ಮುಂದುವರಿಸಿಕೊಂಡು ಬಂದ ನಷ್ಟವನ್ನು ಹೊಂದಾಣಿಕೆ ಮಾಡಲು ನಿರ್ಧರಿಸಿದ್ದಾರೆ.

ಸ್ಪೆಕ್ಯುಲೇಶನ್ ಅಲ್ಲದ ಕರಾಕರಣೆ ವರ್ಷ 2013-14 ರ ವ್ಯವಹಾರ ನಷ್ಟ ರೂ. 1,00,000. 2010-11 ನೇ ಸಾಲಿನ ಬಾಕಿ ಸವಕಳಿ ರೂ. 1,00,000.

ಅವರ ಒಟ್ಟು ಆದಾಯವನ್ನು ಕರಾಕರಣೆ ವರ್ಷ 2016-17ಕ್ಕೆ ಲೆಕ್ಕ ಹಾಕಿರಿ.

11. ಶ್ರೀ ವೈಭವ್‌ರವರು ಹಣಕಾಸು ವರ್ಷ 2015-16 ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಮಾಹಿತಿಯನ್ನು ಸಲ್ಲಿಸಿದ್ದಾರೆ. ಕಲಂ80 ರ ಪ್ರಕಾರ ಒಟ್ಟು ಆದಾಯದಲ್ಲಿ ನೀಡಬಹುದಾದ ಕಡಿತಗಳನ್ನು ಲೆಕ್ಕ ಹಾಕಿರಿ. ಅವರ ಒಟ್ಟು ಆದಾಯ ರೂ. 20,00,000.

1) ಜೀವ ವಿಮೆ ಪ್ರೀಮಿಯಂ ಪಾವತಿಸಿದ್ದು ರೂ. 40,000. ಪಾಲಿಸಿಯ ಮೊತ್ತ ರೂ. 1,50,000, ದಿನಾಂಕ 1-1-2012 ರಂದು ಪಡೆದಿದ್ದು.
2) ಸಾ.ಭ. ನಿಧಿ (PPF)ಗೆ ವಂತಿಗೆ ನೀಡಿದ್ದು ರೂ. 40,000.
3) ರಾ. ಉ.ಪತ್ರ (NSC) VIII ನೇ ಮಾಲಿಕೆಯಲ್ಲಿ ತೊಡಗಿಸಿದ್ದು ರೂ. 50,000.
4) ಜೀವ ವಿಮಾ ನಿಗಮದ ಪೆನ್ಶನ್ ಯೋಜನೆಯಲ್ಲಿ ಪಾವತಿಸಿದ್ದು ರೂ. 40,000.
5) ತೀವ್ರ ವೈಕಲ್ಯದಿಂದ ಬಳಲುತ್ತಿರುವ ಮತ್ತು ಅವರನ್ನು ಅವಲಂಬಿತರಾದ ವಿಧವೆ ಸಹೋದರಿಯ ವೈದ್ಯಕೀಯ ಆರೈಕೆಗೆ ಖರ್ಚು ಮಾಡಿದ್ದು ರೂ. 70,000.

Scanned by CamScanner

6) 2 ವರ್ಷಗಳ ಹಿಂದೆ ತನ್ನ ಮಕ್ಕಳ ಉನ್ನತ ಶಿಕ್ಷಣ ವ್ಯಾಸಂಗಕ್ಕಾಗಿ ಅವರು ಮಾಡಿದ ಸಾಲ ರೂ. 2,00,000 ಮತ್ತು ಅದರ ಮೇಲಿನ ಬಡ್ಡಿ ಹಣಕಾಸು ವರ್ಷದಲ್ಲಿ ಪಾವತಿ ಮಾಡಿದ್ದು ರೂ. 20,000.

7) ಅವರು ತನ್ನ ಕುಟುಂಬ 75 ವರ್ಷ ವಯಸ್ಸಿನ ತಂದೆಯನ್ನೊಳಗೊಂಡು ತೆಗೆದುಕೊಂಡ ಆರೋಗ್ಯ ವಿಮೆಯ ಮೇಲಿನ ಪ್ರೀಮಿಯಂನ್ನು ಚೆಕ್ ಮುಖಾಂತರ ಪಾವತಿಸಿದ್ದು ರೂ. 40,000.

8) a) ಅನುಮೋದಿತ ದೇವಸ್ಥಾನಕ್ಕೆ ದೇಣಿಗೆ ನೀಡಿದ್ದು ರೂ. 30,000

b) ಅಧಿಸೂಚಿತ ವಿಶ್ವವಿದ್ಯಾಲಯಕ್ಕೆ ದೇಣಿಗೆ ರೂ. 20,000

c) ಕುಟುಂಬ ಯೋಜನೆ ಪ್ರೋತ್ಸಾಹಕವಾಗಿ ಮುನಿಸಿಪಾಲಿಟಿಗೆ ನೀಡಿದ ದೇಣಿಗೆ ರೂ. 30,000.

12. ಶ್ರೀ ವಿನಯರವರು ದಿನಾಂಕ 31-3-2016 ರಂದು ಕೊನೆಗೊಳ್ಳುವ ಆದಾಯ ವರ್ಷದ ಈ ಕೆಳಗಿನ ವಿವರಗಳನ್ನು ಒದಗಿಸಿದ್ದಾರೆ :

a) ಅವರು ಒಂದು ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದಾರೆ. ಪ್ರಸ್ತುತ ವರ್ಷದಲ್ಲಿ ಅವರ ಮೂಲ ವೇತನವು ಪ್ರತಿ ತಿಂಗಳಿಗೆ ರೂ. 25,000. ಅವರು ಪ್ರತಿ ತಿಂಗಳಿಗೆ ಮೂಲ ವೇತನದ ಶೇ. 20 ರಷ್ಟು ತುಟ್ಟಿ ಭತ್ಯೆಯನ್ನು ಪಡೆದಿದ್ದಾರೆ. ಅವರು ಮೂಲ ವೇತನದ ಶೇ. 10 ರಷ್ಟು ಮನೆ ಬಾಡಿಗೆ ಭತ್ಯೆಯನ್ನು ಪಡೆದಿದ್ದಾರೆ.

ಅವರ ವೇತನದಿಂದ ಈ ಕೆಳಗಿನ ಕಡತಗಳನ್ನು ಮಾಡಲಾಗಿದೆ :

i) ದಿನಾಂಕ 1-4-2012 ಕ್ಕೂ ಮುಂಚೆ ಹಂಚಿಕೆ ಮಾಡಲಾದ ರೂ. 5,00,000 ಮೌಲ್ಯದ ಪಾಲಿಸಿಯ ಮೇಲೆ ಜೀವ ವಿಮಾ ಕಂತು ರೂ. 30,000

ii) ವೃತ್ತಿ ತೆರಿಗೆ ಪ್ರತಿ ತಿಂಗಳಿಗೆ ರೂ. 200.

b) ಅವರು ಎರಡು ಸಮವಾದ ಭಾಗಗಳನ್ನು ಹೊಂದಿದ ಮನೆಯ ಯಜಮಾನರಾಗಿದ್ದು, ಮೊದಲ ಭಾಗವನ್ನು ತನ್ನ ಸ್ವಂತ ಬಳಕೆಗೆ ಇಟ್ಟುಕೊಂಡಿದ್ದಾರೆ. ಎರಡನೆಯ ಭಾಗವನ್ನು ತಿಂಗಳಿಗೆ ರೂ. 4,500 ಬಾಡಿಗೆಗೆ ನೀಡಿದ್ದಾರೆ. ಮನೆಯ ಪುರಸಭೆ ಮೌಲ್ಯ ರೂ. 80,000 ವಾಗಿರುತ್ತದೆ ಮತ್ತು ಪುರಸಭೆ ಮೌಲ್ಯದ ಶೇ. 10 ರಂತೆ ಪುರಸಭೆಯ ಕರವನ್ನು ಪಾವತಿಸಿದ್ದಾರೆ. ಪ್ರಸ್ತುತ ಸಾಲಿನಲ್ಲಿ ಮರುಪಾವತಿಸಿದ ಮನೆ ಸಾಲ ರೂ. 40,000 ವಾಗಿದ್ದು ಅದರಲ್ಲಿ ಸಾಲದ ಮೇಲಿನ ಬಡ್ಡಿ ರೂ. 10,000 ಒಳಗೊಂಡಿದೆ. ಬಾಡಿಗೆ ನೀಡಿದ ಮನೆಯು 2 ತಿಂಗಳು ಖಾಲಿಯಾಗಿ ಇತ್ತು.

Scanned by CamScanner

c) ಅವರ ಇತರ ಮೂಲಗಳಿಂದ ಬಂದ ಆದಾಯ ಈ ಕೆಳಗಿನಂತಿದೆ :

i) ಲಾಟರಿಯಿಂದ ಗೆದ್ದ ಬಹುಮಾನ ರೂ. 21,000 (ನಿವ್ವಳ).

ii) ಬ್ಯಾಂಕ್ ಅವಧಿ ಠೇವಣಿ ಮೇಲಿನ ಬಡ್ಡಿ ರೂ. 10,000 (ಸ್ಥೂಲ).

iii) 'X' ಕಂಪನಿಯ ಸಾಲಪತ್ರಗಳ ಮೇಲಿನ ಬಡ್ಡಿ ರೂ. 5,400 (ಪಟ್ಟಿಯಲ್ಲಿರುವ).

iv) ಸಹಕಾರಿ ಸಂಘಗಳಿಂದ ಬಂದ ಲಾಭಾಂಶ ರೂ. 5,000.

ಅವರು ಪ್ರಸ್ತುತ ವರ್ಷದಲ್ಲಿ ಈ ಕೆಳಗಿನ ಪಾವತಿಗಳನ್ನು ಮಾಡಿದ್ದಾರೆ :

1) ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಗೆ ರೂ. 10,000.

2) ಅನುಮೋದಿತ ದೇವಸ್ಥಾನದ ರಿಪೇರಿಗಾಗಿ ರೂ. 8,500.

ಕರಾಕರಣೆ ವರ್ಷ 2016-17 ನೇ ಸಾಲಿನ ಅವರ ಒಟ್ಟು ಆದಾಯವನ್ನು ಲೆಕ್ಕ ಹಾಕಿರಿ.

13. ಪ್ರಕರಣ ಅಧ್ಯಯನ (**ಕಡ್ಡಾಯ** ಪ್ರಶ್ನೆ) :

X, Y ಮತ್ತು Z ಪಾಲುಗಾರರು ಲಾಭಹಾನಿಯನ್ನು 6 : 4 : 2 ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. 31-3-2016 ರ ಅಂತ್ಯಕ್ಕೆ ಲಾಭ ಹಾನಿ ತಖ್ತೆಯು ರೂ. 52,000 ಲಾಭವನ್ನು ತೋರಿಸಿದೆ. ಇತರ ಆಕರಿಸಬಹುದಾದ ಖರ್ಚುಗಳ ಹೊರತಾಗಿ ಈ ಕೆಳಗಿನವುಗಳನ್ನು ಲಾಭ–ಹಾನಿ ಖಾತೆಗೆ ಖರ್ಚು ಹಾಕಲಾಗಿದೆ :

a) ವಾರ್ಷಿಕ ಶೇ. 15 ರಂತೆ ಬಂಡವಾಳದ ಮೇಲಿನ ಬಡ್ಡಿ A – ರೂ. 1,800, B – ರೂ. 1,500 ಮತ್ತು C – ರೂ. 800.

b) ಪಾಲುದಾರರ ಸಂಬಳ
A – ರೂ. 20,000, B – ರೂ. 14,000 ಮತ್ತು C – ರೂ. 26,000

c) ಕಾರು ಮಾರಾಟದಿಂದ ಆದ ನಷ್ಟ ರೂ. 7,000.

d) ಸವಕಳಿ ರೂ. 8,000 ಆದರೆ ನಿಯಮಾವಳಿಯ ಪ್ರಕಾರ ರೂ. 7,000 ಮಾತ್ರ ಖರ್ಚು ಹಾಕಬಹುದು.

ಅಂತೆಯೇ ಈ ಕೆಳಗಿನ ಆದಾಯಗಳನ್ನು ಲಾಭ–ಹಾನಿ ತಖ್ತೆಗೆ ಜಮಾ ಮಾಡಲಾಗಿದೆ :

a) ಮರು ವಸೂಲಿ ಮಾಡಿದ ಮುಳುಗಿದ ಸಾಲ (½ ದಷ್ಟನ್ನು ಈ ಹಿಂದೆ ಅಮಾನ್ಯ ಮಾಡಲಾಗಿತ್ತು) ರೂ. 6,000.

b) ಸ್ಪೆಕ್ಯುಲೇಶನ್ ವ್ಯವಹಾರದ ಆದಾಯ ರೂ. 8,000.

2016-2017 ಕರಾಕರಣೆ ಸಾಲಿಗೆ ಸಂಬಂಧಿಸಿದಂತೆ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1) ಕಲಂ 184 ಮತ್ತು 40 (b) ಯಲ್ಲಿ ವಿಧಿಸಿದ ನಿಬಂಧನೆಗಳನ್ನು ಪೂರೈಸಿದಲ್ಲಿ ಒಟ್ಟು ಆದಾಯವೆಷ್ಟು?

2) ಕಲಂ 184 ಮತ್ತು 40 (b) ಯಲ್ಲಿ ವಿಧಿಸಿದ ನಿಬಂಧನೆಗಳನ್ನು ಪೂರೈಸಲು ವಿಫಲವಾದಲ್ಲಿ ಒಟ್ಟು ಆದಾಯವೆಷ್ಟು ? **(3×15=45)**

---

Scanned by CamScanner